**ಉಪಸಾರಿಗೆ ಆಯುಕ್ತರು ಹಾಗೂ ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ, ಮಂಗಳೂರು ದ.ಕ. 575001**
ದೂರವಾಣಿ ಸಂಖ್ಯೆ: 0824-2220577
**E-mail:** rtomng-ka@nic.in

ಸಂ/ಉಸಾಆ&ಹಿಪ್ರಾಸಾಅ/ಮಂ/ 2018-19

ದಿನಾಂಕ: 17-11-2018

## ನಮೂನೆ 29(Altration) ಹಿಂಬರಹ

ಶ್ರೀಮತಿ. ಶೀಲಾ ಶೆಟ್ಟಿ ಯವರೇ, ನೀವು ನಿಮ್ಮ ಬಾಬ್ತು ವಾಹನ ಸಂಖ್ಯೆ:ಕೆಎ-19/ಎಬಿ-8929 (ಆಟೋರಿಕ್ಷಾ ಕ್ಯಾಬ್)ಇದರ ಚಾಸೀಸ್ MD2A45AY7HWL12507 ಇದರ ಪರಿವರ್ತನೆ (Altration)ಗಾಗಿ ನಮೂನೆ 29 ರಲ್ಲಿ ಅರ್ಜಿ ಸಲ್ಲಿಸಿರುವುದು ಸರಿಯಷ್ಟೆ.

**ಓದಲಾಗಿದೆ:**

1) ಕೇಂದ್ರ ಮೋ.ವಾ.ಕಾಯ್ದೆ 1988 ರ ಕಲಂ 52.
2) ಪ್ರಕರಣ 1997(7) Kar.L.J.680A (ವೇಣುಗೋಪಾಲ್ ವಿರುದ್ಧ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಬೆಂಗಳೂರು (ಪಶ್ಚಿಮ).

ಕೇಂದ್ರ ಸರಕಾರದ ಓದಲಾದ ಕಾಯ್ದೆ ಅಡಿಯಲ್ಲಿ ವಾಹನ ತಯಾರಕರು ವಿವರಿಸಿದ ಅಂಶಗಳನೊಳಗೊಂಡ ವಾಹನದ ನೋಂದಣಿ ವಿವರಗಳ ನೋಂದಣಿ ಪತ್ರದಲ್ಲಿ ಯಾವುದೇ ಮೂಲ ರಚನಾತ್ಮಕ (Structural) ಭಾಗಗಳನ್ನಾಗಲಿ ಮಾಹಿತಿಯನ್ನಾಗಲಿ ಪರಿವರ್ತಿಸಿರುವುದನ್ನು (ಇಂಧನದ ಪರಿವರ್ತನೆಯನ್ನು ಹೊರತುಪಡಿಸಿ) ನಿರ್ಬಂದಿಸಿದೆ. ನೀವು ಅರ್ಜಿಸಲ್ಲಿಸಿರುವ ವಾಹನದ ವಿವರ/ಭಾಗದ ಪರಿವರ್ತನೆಯು ಕಲಂ 52 ರ ಉಲ್ಲಂಘನೆಯಾಗಿದ್ದು, ವಾಹನ ತಯಾರಕರು ನಿಗದಿಪಡಿಸಿದ ವಿವರದ ಪರಿವರ್ತನೆಯಾಗುತ್ತದೆ. ಆದ್ದರಿಂದ ವಾಹನದ ಚಾಸೀಸ್ ಬದಲಾವಣೆಯು ಕಲಂ 52ರ ವ್ಯಾಪ್ತಿಗೆ ಬರುವುದಿಲ್ಲ.

ಮುಂದುವರೆದು, ಓದಲಾದ ನ್ಯಾಯಾಲಯದ ಪ್ರಕಟಿತ ಪ್ರಕರಣದಲ್ಲಿ ವಾಹನದ ಯಾವುದೇ ಪರಿವರ್ತನೆಯ ಅರ್ಜಿಯನ್ನು ಮಾನ್ಯ ಮಾಡುವುದು ಅಥವಾ/ಮತ್ತು ತಿರಸ್ಕರಿಸುವುದು ನೋಂದಣಿ ಪ್ರಾಧಿಕಾರದ ವಿವೇಚನೆಗೆ ಸಂಬಂಧಿಸಿದ ವಿಷಯವಾಗಿರುತ್ತದೆ.

ಈ ಮೇಲ್ಕಂಡ ಕಾನೂನಿನ ಚೌಕಟ್ಟಿನ ಅಡಿಯಲ್ಲಿ ನೀವು ವಾಹನದ ಕೆಎ-19/ಎಬಿ-8929 (ಆಟೋರಿಕ್ಷಾ ಕ್ಯಾಬ್) ಪರಿವರ್ತನೆ ಕೋರಿ ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಈ ಹಿಂಬರಹದ ಮೂಲಕ ಅರ್ಜಿಯ ತಿರಸ್ಕಾರದಿಂದ ನೀವು ಬಾಧಿತರಾದಲ್ಲಿ, ಈ ತಿಳುವಳಿಕೆ ಪಡೆದ 30 ದಿನಗಳ ಒಳಗಾಗಿ ಮೇಲ್ಮನವಿಯನ್ನು ಮೇಲ್ಮನವಿ ಪ್ರಾಧಿಕಾರವಾದ, ಮಾನ್ಯ ಜಂಟಿ ಸಾರಿಗೆ ಆಯುಕ್ತರು, ಶಿವಮೊಗ್ಗ ವಿಭಾಗ, ಪ್ರಾದೇಶಿಕ ಸಾರಿಗೆ ಕಛೇರಿ ಆವರಣ, ಶಿವಮೊಗ್ಗ ಇವರಿಗೆ ಸಲ್ಲಿಸಬಹುದಾಗಿದೆ.

ನೋಂದಣಿ ಪ್ರಾಧಿಕಾರ ಮತ್ತು
ಉಪಸಾರಿಗೆ ಆಯುಕ್ತರು ಹಾಗೂ
ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿ(ಪ್ರಭಾರ)
ಮಂಗಳೂರು ದ.ಕ.
17/11/18

ಗೆ,
ಶ್ರೀಮತಿ.ಶೀಲಾ ಶೆಟ್ಟಿ, ಕೋಂ ದಾಮೋದರ ಶೆಟ್ಟಿ, ಮ.ನಂ.12/1, ಪಿ.ಎಸ್.ಶೆಟ್ಟಿ ಕಂಪೌಂಡ್, ಬೋಂದೇಲ್ ಪೋಸ್ಟ್, ಪದವಿನಂಗಡಿ, ಮಂಗಳೂರು.